

ಧರ್ಮನಂತೆಯೇ ಕೂತು ನಿಧಾನಕ್ಕೆ ಬಟ್ಟೆಗೆ ನೋವಾಗದ ಹಾಗೆ ಮಾಯಿಶೀನಣ್ಣ ಬಟ್ಟೆ ತೊಳೆಯಲು ಕಲಿಯುತ್ತಿದ್ದ. ಧರ್ಮ ಅಲ್ಲೇ ಆಟವಾಡಿ ಕೊಳ್ಳುತ್ತ ಮಾಯಿಶೀನಣ್ಣನಿಗೆ ಬಟ್ಟೆ ತೊಳೆಯುವ ಮುಂದಿನ ಹಂತದ ಸೂಚನೆ ನೀಡುತ್ತಿದ್ದ. 'ನೀನು ತೊಳೆದ ಬಟ್ಟೆಯನ್ನು ಹೀಗೆ ಜಾಲಾಡಿ ಹೀಗೆ ಮೆಲ್ಲಗೆ ತಿರುಚಿ ನೀರು ಹೋಗುವ ತನಕ ಹಿಂಡಿ ನನಗೆ ಕೊಡು, ನಾನು ಆ ಬಳ್ಳಿಯ ಮೇಲೆ ಒಣ ಹಾಕುವೆ. ಅಜ್ಜಿ ಬಟ್ಟೆ ತೊಳೆದು ಕೊಡುವಾಗಲೂ ನಾನೇ ಒಣಹಾಕುತ್ತಿದ್ದೆ' ಅನ್ನುತ್ತ ಧರ್ಮ ಉತ್ಸಾಹದಿಂದಲೇ ಹೇಳಿದ.

ಮಾರನೆ ದಿನ ತೋಟದಲ್ಲಿ ಆಟವಾಡುವಾಗ ಅಲ್ಲಿದ್ದ ಬಾಳೆಯ ಗಿಡವೊಂದು 'ಧರ್ಮಾ' ಅಂತ ಕೂಗಿತು. 'ಏನು ಬಾಳಣ್ಣಾ?' ಅಂತ ಧರ್ಮ ನಿಂತು ಕೇಳಿದ. 'ನಿನ್ನ ಮಾಯಿಶೀನಣ್ಣ ಎಷ್ಟು ಚಂದ ಬಟ್ಟೆ ತೊಳೀತಾನಲ್ಲ. ಅವನು ಬಟ್ಟೆ ತೊಳೆಯಲು ಬಂದರೆ ಇಡೀ ತೋಟವೇ ಸಂಭ್ರಮಿಸುತ್ತದೆ' ಅಂತ ನೈಸಾಗಿ ಹೇಳಿತು. 'ಹೌದು. ಈಗ ಅವನು ಬಟ್ಟೆ ತೊಳೆಯುವುದರಲ್ಲಿ ಎಕ್ಸ್‌ಪರ್ಟು ಆಗಿದ್ದಾನೆ. ನಾನು ಅವನಿಗೆ ಸರಿಯಾಗಿ ಕಲಿಸಿಕೊಟ್ಟದ್ದೇನೆ' ಅನ್ನುತ್ತ ಧರ್ಮನೂ ಹೆಮ್ಮೆಯಿಂದಲೇ ಮಾತಿಗೆ ನಿಂತ. ಆಗ ಬಾಳೆಯೇ ತುಂಬ ಬೇಸರದಿಂದ 'ನೋಡಿಲ್ಲಿ ಧರ್ಮಾ, ನನ್ನ ಎಲೆಗಳೆಲ್ಲ ಎಷ್ಟು ಧೂಳಾಗಿವೆ. ನಿನ್ನ ವರುಣಮಾಮನ ಡ್ಯೂಟಿ ಶುರುವಾಗುವ ತನಕ ನಾನು ಹೀಗೇ ಗಲೀಜಾಗಿ ಇರಬೇಕಾ. ನೀನು ಸ್ವಲ್ಪ ಹೇಳುತ್ತೀಯಾ ನಿನ್ನ ಮಾಯಿಶೀನಣ್ಣನಿಗೆ, ನನ್ನ ಬಟ್ಟೆಯನ್ನೂ ಎಲ್ಲಿಯೂ ಹರಿಯದೇ ತೊಳೆದು ಕೊಡಲು?' ಅಂತ ಅಂಗಲಾಚಿತು. ಅದಕ್ಕೆ ಧರ್ಮ, 'ನೀನೇನೂ ಚಿಂತೆ ಮಾಡಬೇಡ. ನಾಳೆಯಿಂದ ಅವನು ನೀರು ತುಂಬಿಸುವ ಡ್ರಮ್ಮಿನಲ್ಲಿ ನಿನ್ನ ಬಟ್ಟೆಗಳನ್ನು ಅದ್ದಿ ಇರಿಸು. ಅವನಿಗೆ ಏನೂ ಗೊತ್ತಾಗುವುದಿಲ್ಲ. ನನ್ನ ಹಾಗೂ ಅಜ್ಜಿಯದೇ ಬಟ್ಟೆಗಳಿರಬೇಕೆಂದು ಸ್ವಚ್ಛಗೊಳಿಸುತ್ತಾನೆ' ಅಂತ ಬಾಳೆಗಿಡದ ಬೆನ್ನು ತಟ್ಟಿದ. ಬಾಳೆಗಿಡ ಹಾಗೆಯೇ ಮಾಡತೊಡಗಿತು. ಅದರ ಎಲೆಗಳು ಥಳ ಥಳ ಹೊಳೆದವು.

ಮುಂದೆ ಪಪ್ಪಾಯಿ ಗಿಡವೂ ಇದನ್ನೇ ಹೇಳಿತು. ಧರ್ಮ ಅದಕ್ಕೂ ಬಾಳೆಗಿಡಕ್ಕೆ ಹೇಳಿದ್ದೇ ಉಪಾಯ ಹೇಳಿದ. ಅದರ ಎಲೆಗಳೂ ಹೊಳಪಿನಿಂದ ಕಂಗೊಳಿಸಿದವು. ಹೀಗೇ ಮಾಯಿಶೀನಣ್ಣನಿಗೆ ಮುಂದಿನ ಒಂದು ತಿಂಗಳಲ್ಲಿ ಬಟ್ಟೆ ತೊಳೆಯುವ ಕಾಯಕ ರೂಢಿಯಾಯಿತು. ಭೀಮಜಿ ದೊಡ್ಡಪ್ಪ ಹೇಳಿದ ಹಾಗೆ ಅಜ್ಜಿ ಮಾಯಿಶೀನಣ್ಣನಿಗೆ ಸಂಬಳ ಕೊಡಲು ಮುಂದಾದಳು. ಅವನು ಅಚ್ಚರಿಯೆಂಬಂತೆ ಒಂದು ಬೇಡಿಕೆ ಮುಂದಿಟ್ಟ. 'ನನಗೆ ಹಣ ಬೇಡಮ್ಮಾ. ಒಂದು ಸಹಾಯ ಮಾಡಿ' ಅಂತ ಗೋಗರೆದ. ಅಜ್ಜಿ, 'ಏನಪ್ಪಾ ಅಂಥಾ ಸಹಾಯ ?' ಎಂದು ಕೇಳಿದಳು. 'ನಮ್ಮ ಮನೆಯಲ್ಲಿ ರಾತ್ರಿಯಾಯಿತೆಂದರೆ ಕತ್ತಲೆ, ಚಿಮಣಿ ಬೆಳಕಿನಲ್ಲೇ ಸಂಸಾರ. ನಿಮ್ಮದೇ ಪಂಪ್‌ಸೆಟ್‌ನಿಂದ ಒಂದು ವಯರ್ ಎಳೆದು ಬಲ್ಬ್ ಹಾಕಿಕೊಂಡು ನನ್ನ ಗುಡಿಸಲಿಗೆ ಬೆಳಕು ಮಾಡಿಕೊಳ್ಳುವೆ' ಅಂತ ದುಂಬಾಲು ಬಿದ್ದ. ಅಜ್ಜಿ, 'ಸರಿ ಹಾಗೇ ಮಾಡು' ಎಂದು ಒಪ್ಪಿಗೆ ಕೊಟ್ಟಳು.

'ಮಾಯಿಶೀನಣ್ಣ ಬಟ್ಟೆ ತೊಳೆದುಕೊಡಲು ಬರೀ ವಿದ್ಯುತ್ತು ಕೊಟ್ಟರೆ ಸಾಕಾ ಅಜ್ಜೀ?' ಅಂತ ಧರ್ಮ ಕೇಳಿದ. 'ಏನೋಪ್ಪ, ಅವನಿಗೆ ಕರೆಂಟಿನ ಅಗತ್ಯವಿದೆಯಂತಲ್ಲ ಧರ್ಮಾ' ಅಂದಳು ಅಜ್ಜಿ. ದೊಡ್ಡಪ್ಪ ಫೋನ್ ಮಾಡಿ, 'ಮಾಯಿಶೀನ ಸರಿಯಾಗಿ ಬಟ್ಟೆ ತೊಳೆದು ಕೊಡುತ್ತಿದ್ದಾನೆಯೇ?' ಎಂದು ವಿಚಾರಿಸಿಕೊಂಡರು. ಧರ್ಮ ಅದಕ್ಕೆ, 'ಹೌದು ದೊಡ್ಡಪ್ಪ, ಕರೆಂಟಿನ ಕನೆಕ್ಷನ್ ಕೊಟ್ಟರೆ ಸಾಕಂತೆ ಅವನಿಗೆ. ದಿನವೂ ಬಟ್ಟೆ ತೊಳೆದುಕೊಡ್ತಾನಂತೆ' ಅಂತ ಸಹಜವಾಗಿಯೇ ಹೇಳಿದ. ದೊಡ್ಡಪ್ಪನಿಗೆ ಒಮ್ಮೆಲೇ ಅಚ್ಚರಿಯೆನಿಸಿದರೂ 'ನಮ್ಮ ಧರ್ಮ ಏನು ಹೇಳಿದರೂ ಅದು ಸರಿಯಾಗೇ ಇರುತ್ತದೆ' ಅಂದುಕೊಳ್ಳುತ್ತ ಫೋನಿಟ್ಟರು.

ಇದೇ ನಮ್ಮ 'ಮಾಯಿಶೀನ' ಮುಂದೆ ಮಶೀನಣ್ಣನಾದ. ಉಳ್ಳವರ ಮನೆಯ ಒಂದು ಮೂಲೆಯಲ್ಲಿ ಕುಳಿತ. ವಿದ್ಯುತ್ ಸ್ವಿಚ್ ಹಾಕಿದರೆ ಸಾಕು ಸಣ್ಣಗೆ ಕಂಪಿಸುತ್ತಾ ಗಡ ಗಡ, ಜುಳುಜುಳು, ಗರಗರ ಸದ್ದು ಮಾಡುತ್ತ, ನಿರಂತರ ಬಟ್ಟೆ ತೊಳೆದು ಕೊಡುತ್ತಿದ್ದಾನೆ. ಒಣಗಲು ಹಾಕುವವರು ಮಾತ್ರ ನಮ್ಮ ಧರ್ಮನಂತಹ ಮಕ್ಕಳೇ.

●